| 8ನೇ ತರಗತಿ | ಸೇತುಬಂಧ ಶಿಕ್ಷಣ ಕಾರ್ಯಕ್ರಮ | ಸಮಾಜವಿಜ್ಞಾನ |
|---|---|---|

ಗಮನಿಸಿ :

ಈ ಸಲ 2023-24 ನೇ ಸಾಲಿನಲ್ಲಿ ಹದಿನೈದು ದಿನಗಳ ಸೇತುಬಂಧ ನಮ್ಮ ತರಗತಿ ಮಕ್ಕಳಿಗೆ ನಡೆಸಬೇಕಾಗಿರುತ್ತದೆ. ಹಾಗೆ ನಡೆಸುವಾಗ ಇಲ್ಲಿ ಕೆಲವು ಅಂಶಗಳನ್ನು ತಾವು ಗಮನಿಸಲು ಕೋರಿದೆ.

- ಇಲ್ಲಿ ನೀಡಿದ ಕಲಿಕಾ ಫಲಗಳು, ಸಮಾಜ ವಿಜ್ಞಾನ ವಿಷಯದ ಮೂಲಭೂತ ಕಲಿಕಾ ಫಲ ಮತ್ತು ಹಿಂದಿನ ತರಗತಿಯ ಅಂತರಗಳನ್ನು ಗಮನದಲ್ಲಿರಿಸಿ ನೀಡಲಾಗಿದೆ. ಮತ್ತೊಂದು ಆಯಾಮವಾದ ವಿದ್ಯಾರ್ಥಿಗಳ ಓದು ಮತ್ತು ಬರೆಹದ ಆಯಾಮ ಬಹಳ ಮುಖ್ಯ. ಒಂದುವೇಳೆ ಓದಲು, ಬರೆಯಲು ಬರುತ್ತಿಲ್ಲವೆಂದರೆ ಅಂತಹಾ ವಿದ್ಯಾರ್ಥಿಗಳಿಗೆ ನಿಮ್ಮ ಸ್ವಾಯತ್ತತೆಯಿಂದ ಶಾಲಾ ಪರಿಸರಕ್ಕೆ ಅನುಗುಣವಾದ ಚವಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
- ಇಲ್ಲಿ ಕಲಿಕಾ ಫಲಗಳಿಗೆ ವಿವಿಧ ಚಟುವಟಿಕೆಗಳನ್ನು ನೀಡಲಾಗಿದೆ. ನಿಗಧಿತ ಅವಧಿಗೆ ನಿಮ್ಮ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಹೊಸ ಚಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
- ಓದು ಬರೆಹ ಬರುವ ಮಕ್ಕಳಿಗೆ ಆರಂಭದಲ್ಲಿ ಟಿಪ್ಪಣಿ ಬರೆಯುವ, ಮಾಹಿತಿ ಸಂಗ್ರಹಿಸುವ ಕೌಶಲಗಳಿಗೆ ಮಾರ್ಗದರ್ಶನ ನೀಡಿರಿ.

ತಮ್ಮ ಈ ಸಾಲಿನ ಸೇತುಬಂಧ ಚೆಂದಾಗಲಿ… ಶುಭಾಶಯಗಳು

| ಆಪೇಕ್ಷಿತ ಕಲಿಕಾಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|
| 13.ಮಹಿಳೆಯರ ಸಬಲೀಕರಣ ಮತ್ತು ಪರಿಸರ ಚಳುವಳಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳನ್ನು ಉದಾಹರಣೆ ಸಹಿತ ವಿವರಿಸುತ್ತಾರೆ | 13.1.ಸ್ವಾತಂತ್ರ್ಯಹೋರಾಟದಲ್ಲಿ ಮಹಿಳೆಯರ ಪಾತ್ರ ಅರಿಯುವರು.<br>13.2.ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಸಾಧನೆ ತಿಳಿಯುವರು.<br>13.3.ಮಹಿಳೆಯರ ಸ್ವಸಹಾಯ ಸಂಘ ರಚನೆ ಮತ್ತು | **13.1.ಪಟ್ಟಿ ಮಾಡುವುದು:**ಐತಿಹಾಸಿಕವಾಗಿ ಮತ್ತು ಸಾಮಾಜಿಕವಾಗಿ ಸಾಧನೆ ಮಾಡಿದ ಮಹಿಳೆಯರ ಹೆಸರನ್ನು ಪಟ್ಟಿ ಮಾಡಿರಿ.<br>**13.2.ಸಂದರ್ಶನ:**ನಿಮ್ಮ ಸ್ಥಳೀಯ ಸಾಧನೆಗೈದ ಮಹಿಳೆಯರನ್ನು ಸಂದರ್ಶಿಸಿ ಸಾಧನೆಗೆ ಪ್ರೇರೇಪಣೆಯಾದ ಅಂಶಗಳನ್ನು ಕಲೆ ಹಾಕಿ.<br>**13.3.ಭೇಟಿ ಮಾಡುವುದು:** ನಿಮ್ಮ ಸಮೀಪದ ಮಹಿಳಾ ಸಂಘಕ್ಕೆ ಭೇಟಿ ನೀಡಿ ಅಗತ್ಯ ಮಾಹಿತಿ ಕಲೆ ಹಾಕಿ<br>**13.4.ಚರ್ಚಾ ಸ್ಪರ್ಧೆ:** ”-ಮಹಿಳೆ ಸ್ವಾವಲಂಭಿ ಜೀವನ ನಡೆಸಲು ಸಾಧ್ಯವೆ “ ಈ | 13.1.ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರ ರಾಜಕೀಯ, ಆರ್ಥಿಕ, ವಿಮಾನಯಾನ, ಕೈಗಾರಿಕೆ, ಸಾರಿಗೆ, ಶಿಕ್ಷಣ, ವಿಜ್ಞಾನ, ರಕ್ಷಣೆ, ಪರಿಸರ, ತಂತ್ರಜ್ಞಾನ, ಕ್ರೀಡೆ,ಸಾಹಿತ್ಯ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರ ಹೆಸರುಗಳನ್ನು ಪಟ್ಟಿ ಮಾಡಿಸಿರಿ. |

| | | | |
|---|---|---|---|
| | ಕಾರ್ಯಗಳನ್ನು ವಿವರಿಸುವರು<br>13.4.ಸ್ವಾತಂತ್ರ್ಯಾ ನಂತರ ಕರ್ನಾಟಕದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದ ಮಹಿಳೆಯರನ್ನು ಹೆಸರಿಸುವರು | ವಿಷಯ ಕುರಿತು ಮುಕ್ತವಾಗಿ ಚರ್ಚಿಸಿ.<br>**13.5.ಮಾಹಿತಿ ಕಲೆಹಾಕುವುದು:-** “ಮಹಿಳಾ ದಿನಾಚರಣೆ”ಯ ಕುರಿತು ಮಾಹಿತಿ ಕಲೆಹಾಕಿರಿ.<br>**13.6.ಮಹಿಳಾ ಪ್ರಧಾನ ನಾಟಕ ಪ್ರದರ್ಶನ**<br>**13.7.ಮಕ್ಕಳ ಹರಟೆ ಜಗಲಿ ಕಟ್ಟೆ :** ಮಹಿಳೆಯರ ಸ್ಥಾನಮಾನ ಮೀಸಲಾತಿ, ಸಾಧನೆಗೈದ ಮಹಿಳೆಯರು, ಪುರುಷರು –ಮಹಿಳೆಯರ ತಾರತಮ್ಯದ ಬಗ್ಗೆ ಜಗಲಿ ಕಟ್ಟೆ ನಿರ್ಮಿಸಿ ಹರಟೆ ಕಾರ್ಯಕ್ರಮ ಮಾಡಿರಿ. | - ಮೌಖಿಕ, ಲಿಖಿತ ಮಂಡನೆ ಮಾಡಲು ಪ್ರೇರೇಪಿಸಿ.<br>13.2.ಸ್ಥಳೀಯ ಸಂಸ್ಥೆಯ ಮಹಿಳಾ ಸದಸ್ಯರನ್ನುಶಾಲೆಗೆ ಆಹ್ವಾನಿಸಿ. ಮಹಿಳೆಯರ ಸ್ಥಾನಮಾನದ ಬಗ್ಗೆ ಸಂದರ್ಶನ ಮಾಡಿಸಿ.<br>13.3.ಸಮೀಪದ ಮಹಿಳಾ ಸಂಘಕ್ಕೆ ಭೇಟಿ ನೀಡಿ, ಮಹಿಳೆಯರ ಸಬಲೀಕರಣದಲ್ಲಿ ಸಂಘದ ಪಾತ್ರದ ಬಗ್ಗೆ ತಿಳಿಯಲು ಪ್ರೇರೇಪಿಸಿ.<br>13.5.ವಿವಿಧ ಸಂಸ್ಥೆಗಳಿಂದ ನಡೆಯಲ್ಪಡುವ ಮಹಿಳಾ ಕಾರ್ಯಕ್ರಮದ ಬಗ್ಗೆ ಮಾಹಿತಿ ಸಂಗ್ರಹಿಸಲು ಅನುಕೂಲಿಸಿರಿ.<br>13.7.ತರಗತಿ ವಿದ್ಯಾರ್ಥಿಗಳನ್ನು 2 ತಂಡಗಳಾಗಿ ವಿಂಗಡಿಸಿ, ತಂಡಗಳಿಗೆ ಹೆಸರಿಟ್ಟು, ವಿಷಯಾಧಾರಿತವಾಗಿ ಹರಟೆ/ಚರ್ಚಿಸುವಂತೆ ತಂಡಗಳನ್ನು |

| | | | |
|---|---|---|---|
| | | | ಪ್ರೇರೇಪಿಸಿ.<br>(ಅವಧಿಗಳು-03) |
| 2.ಇತಿಹಾಸದ ವಿಭಿನ್ನ ಆಧಾರಗಳನ್ನು ಗುರುತಿಸುತ್ತಾರೆ ಮತ್ತು ಅವುಗಳನ್ನು ವರ್ಗೀಕರಿಸುತ್ತಾರೆ ಹಾಗೂ ವ್ಯಾಖ್ಯಾನಿಸುತ್ತಾರೆ | 2.1.ಇತಿಹಾಸದ ಪರಿಕಲ್ಪನೆ ಮೂಡಿಸುವುದು.<br><br>2.2.ಇತಿಹಾಸದ ರಚನೆಯ ಆಧಾರಗಳನ್ನು ವಿಂಗಡಿಸುವುದು.<br><br>2.3.ಇತಿಹಾಸದ ರಚನೆಯಲ್ಲಿ ಆಧಾರಗಳ ಪಾತ್ರವನ್ನು ವಿವರಿಸುವರು. | **2.1.ಪಟ್ಟಿ ಮಾಡುವುದು:** ಕೊಟ್ಟಿರುವ ಅಂಶಗಳನ್ನು ಸಾಹಿತ್ಯ ಮತ್ತು ಪುರಾತತ್ವ ಆಧಾರಗಳನ್ನು ಪಟ್ಟಿ ಮಾಡಿರಿ.<br><br><br><br><br>**2.2. ಆಲ್ಬಂ ತಯಾರಿಕೆ:** *ಸ್ಮಾರಕಗಳು ನಾಣ್ಯಗಳು ಶಾಸನಗಳು ಐತಿಹಾಸಿಕ ಸ್ಥಳಗಳು ಲಾವಣಿಗಳು ಜಾನಪದ ಕಥೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.<br>**2.3.ಗುಂಪು ಚರ್ಚೆ:** ಆಧಾರಗಳು ಇತಿಹಾಸ ರಚನೆ ಮಾಡಲು ಹೇಗೆ ಸಹಾಯಕವಾಗಿವೆ ಎಂಬುದರ ಬಗ್ಗೆ ಚರ್ಚಿಸಿ<br>**2.4.ಕಥೆ ಹೇಳಿಸುವುದು:**ನಿಮ್ಮ ಊರಿನ ಇತಿಹಾಸವನ್ನು ಕಥೆಯ ರೂಪದಲ್ಲಿ ವ್ಯಕ್ತ ಪಡಿಸಿ.ಆ ಹೆಸರು ಹೇಗೆ ಬಂತು ತಿಳಿಯಿರಿ. | 2.1.ಕೊಟ್ಟಿರುವ ಅಂಶಗಳನ್ನು ಸಾಹಿತ್ಯ ಮತ್ತು ಪುರಾತತ್ವ ಆಧಾರಗಳಾಗಿ ವಿಂಗಡಿಸಿ, ಪಟ್ಟಿ ಮಾಡಿಸಿ.<br>1 ಲಾವಣಿಗಳು 2 ನಾಣ್ಯಗಳು<br>3 ಸ್ಮಾರಕಗಳು 4 ಐತಿಹ್ಯಗಳು<br>5 ದೇಶಿ ಸಾಹಿತ್ಯ 6 ಶಾಸನಗಳು<br>7 ವಿದೇಶಿ ಸಾಹಿತ್ಯ 8 ಇತರ ಅವಶೇಷಗಳು<br>9 ಜಾನಪದ ಕಥೆಗಳು<br>2.2.ಸ್ಮಾರಕಗಳು, ನಾಣ್ಯಗಳು,ಶಾಸನಗಳು, ಐತಿಹಾಸಿಕ ಸ್ಥಳಗಳು, ಲಾವಣಿಗಳು,ಮತ್ತು ಜಾನಪದ ಕಥೆಗಳ ಚಿತ್ರಗಳನ್ನು,ಸಂಗ್ರಹಿಸಲು ವೃತ್ತ ಪತ್ರಿಕೆಗಳು, ಮ್ಯಾಗಜಿನ್‌ಗಳು, ಅಂತರ್ಜಾಲ ಮುಂತಾದವುಗಳ ಬಳಕೆ ಮೂಲಕ ಸಹಕರಿಸಿ. |

| | | | |
|---|---|---|---|
| | | 2.5.ಸ್ಥಳ ಭೇಟಿ:- ನಿಮ್ಮ ಊರಿನಲ್ಲಿರುವ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿರಿ. | 2.3. ಸ್ಮಾರಕಗಳು, ನಾಣ್ಯಗಳು, ಲಾವಣಿಗಳು, ದೇಶೀಸಾಹಿತ್ಯ, ವಿದೇಶಿ ಸಾಹಿತ್ಯ ,ಶಾಸನಗಳು, ಜಾನಪದ ಕಥೆಗಳನ್ನು ಗುಂಪುಗಳಲ್ಲಿ ಹಂಚಿ ಚರ್ಚಿಸಲು ಪ್ರೇರೇಪಿಸಿ.<br>2.4.ನಿಮ್ಮ ಊರಿನ ಹೆಸರು ಹೇಗೆ ಬಂತು? ಹಾಗೂ  ನಿಮ್ಮ ಊರಿನ ಸಾಹಿತ್ಯ ಮತ್ತು ಪುರಾತತ್ವ ಆಧಾರಗಳಿಗೆ ಸಂಬಂಧಿಸಿದ ಕಥೆಗಳನ್ನು ಸ್ನೇಹಿತರಿಂದ, ಹಿರಿಯರಿಂದ ತಿಳಿಯುವಂತೆ ಅನುಕೂಲಿಸಿ.<br>2.5.ಸಮೀಪದ ಪ್ರಾಚೀನ ದೇವಸ್ಥಾನ, ಸ್ಮಾರಕ, ಐತಿಹಾಸಿಕ ಸ್ಥಳಗಳಿಗೆ ಪೋಷಕರ ಸಹಾಯದಿಂದ ಹೋಗಿ, ಅಲ್ಲಿನ ಇತಿಹಾಸ ತಿಳಿಯಲು ಪ್ರಯತ್ನಿಸಿ. ಅಲ್ಲಿರುವ ಆಧಾರಗಳನ್ನು ಪಟ್ಟಿ ಮಾಡಿ ವಿಂಗಡಿಸಿ ಬರೆಯಲು |

| | | | |
|---|---|---|---|
| | | | ಸಹಕರಿಸಿ.(ಅವಧಿಗಳು-03) |
| 22.ಭೂಪಟದ ಮೇಲೆ ಭೌಗೋಳಿಕ ಸಂಕೇತಗಳು, ಚಿಹ್ನೆಗಳನ್ನು ಬಳಸುತ್ತಾ ಅರ್ಥೈಸುತ್ತಾರೆ ವಿವಿಧ ಭೂಪಟಗಳನ್ನು ವರ್ಗೀಕರಿಸುತ್ತಾರೆ ಭೂಪಟ ರಚನೆಗೆ ಅಗತ್ಯವಾದ ಘಟಕಾಂಶಗಳನ್ನು ಗುರುತಿಸುತ್ತಾರೆ.<br>ಉದಾ: ಸ್ಕೇಲ್ (ಅಳತೆ), ದೂರ, ದಿಕ್ಕು ಮತ್ತು ಚಿಹ್ನೆಗಳು. | 22.1.ಭಾರತ ನಕ್ಷೆ ಬರೆಯುವ ವಿಧಾನ. ನಕಾಶೆಗಳ ವಿಧಗಳನ್ನು ತಿಳಿಯುವುದು.<br><br>22.2.ನಕಾಶೆಗಳ ಚಿಹ್ನೆ ಸಂಕೇತ ಅವುಗಳ ಉಪಯೋಗ ಅರಿಯುವುದು.<br><br>22.3.ನಕಾಶೆಗೆ ಬಣ್ಣ ಹಾಕುವ, ಓದುವ ಕೌಶಲ ಅರಿಯುವುದು. | 22.1.ಪಿರಮಿಡ್ ರಚನೆ:ಸುಳಿವು ಆಧಾರಿತವಾಗಿ ಸಂಖ್ಯೆಗಳ ಅನುಸಾರವಾಗಿ ಸೂಕ್ತ ಉತ್ತರ ಪಿರಮಿಡ್ ಬಾಕ್ಸಗಳಲ್ಲಿ ತುಂಬಿರಿ.<br><br>22.2.ನಕ್ಷೆ ರಚನೆಯ ರಂಗೋಲಿ ಸ್ಪರ್ಧೆ: ಭಾರತದ ನಕ್ಷೆಯನ್ನು ರಂಗೋಲಿಯಲ್ಲಿ ಬಿಡಿಸಿ ಬಣ್ಣ ತುಂಬಿರಿ.<br>22.3.ಮಾದರಿ ತಯಾರಿಕೆ:- ದಿಕ್ಕುಗಳನ್ನು ಪರಿಚಯಿಸುವ ದಿಕ್ಸೂಚಿಯ ಮಾದರಿಯನ್ನು ತಯಾರಿಸಿ.<br><br>22.4.ಅಣಕು ಅಭಿನಯ:8 ಜನರ ತಂಡ ರಚಿಸಿ ದಿಕ್ಕುಗಳ ಪರಿಚಯ ನೀಡುವಂತೆ ಸಾಪೇಕ್ಷಕವಾಗಿ ಅಭಿನಯಿಸಿ. | 22.1. ಶಿಕ್ಷಕರು ಮಾದರಿ ಪಿರಮಿಡ್ ರಚಿಸಿ. ಇಲ್ಲಿ ಸುಳುಹುಗಳು ಹಿಂದೆ ಮುಂದಾಗಿವೆ. ಸರಿಯಾದ ಉತ್ತರಗಳನ್ನು ಪಿರಮಿಡ್‌ನ ಸೂಕ್ತ ಸ್ಥಳಗಳಲ್ಲಿ ತುಂಬಲು ಸಹಕರಿಸಿ.<br>ಸುಳಿವುಗಳು:<br>1 ಭಾರತ ಹೊಂದಿರುವ ಜಲಸಂಧಿ(1)<br>2.ನಮ್ಮ ರಾಜ್ಯ ಯಾವುದು?(4 )<br>3.ಭಾರತದ ಭೂಶಿರದ ತುದಿ(5)<br>4ಭಾರತದ ಪವಿತ್ರ ನದಿ(2)<br>5.ಭಾರತ ಒಂದು — ದ್ವೀಪವಾಗಿದೆ(3)<br>6 ಭಾರತದ ಉತ್ತರದ ಪರ್ವತ ಸಾಲು (7)<br>7.ಭಾರತದ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯ (6)<br>22.2.ಶಾಲೆಯಲ್ಲಿ ಭಾರತ ಮತ್ತು ರಾಜ್ಯಗಳ ನಕ್ಷೆ ಬಿಡಿಸುವ ರಂಗೋಲಿ |

| | | | |
|---|---|---|---|
| | | 22.5.ಒಗಟುಗಳ ಬಗ್ಗೆ ಪದಬಂಧ: ಭಾರತದ ನಕ್ಷೆಯಲ್ಲಿ ರಾಜ್ಯಗಳನ್ನು ತಿಳಿಯುತ್ತಾ ನಮ್ಮ ರಾಜ್ಯ ಕರ್ನಾಟಕದ ಜಿಲ್ಲೆಗಳನ್ನು ತಿಳಿಯಲು ಒಗಟುಗಳನ್ನು ರಚಿಸಿ<br><br>22.6.ಪಟ್ಟಿ ಮಾಡಿ: ಭಾರತದ ರಾಜ್ಯಗಳನ್ನು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪಟ್ಟಿಮಾಡಿರಿ. | ಮತ್ತು ನಕ್ಷೆಗೆ ಬಣ್ಣ ತುಂಬಿಸುವ ಸ್ಪರ್ದೆ ಏರ್ಪಡಿಸುವಂತೆ ಅನುಕೂಲಿಸಿ.<br>22.4.ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಎಂಟು ದಿಕ್ಕುಗಳಲ್ಲಿ ನಿಲ್ಲಿಸಿ ತಮ್ಮನ್ನೆ ದಿಕ್ಕುಗಳಾಗಿ ಪರಿಚಯಿಸಲು ಅನುಕೂಲಿಸಿ.<br>22.5.ಒಗಟುಗಳನ್ನು ರಚಿಸಲು ಸಹಕರಿಸಿ ಉದಾ:<br>1.ಆ ನಗರದಲ್ಲಿ ರಾಮನಿದ್ದಾನೆ<br>2.ದಕ್ಷಿಣದ ವಿರುದ್ದ ದಿಕ್ಕಿನಲ್ಲಿ ನಮ್ಮ ರಾಜ್ಯಭಾಷೆಯಿದೆ<br>3.ದುರ್ಗಮ ಹಾದಿಯ ಬಂಡೆಗಳ ಮೇಲೆ ಚಿತ್ರಗಳನ್ನು ಕೆತ್ತಲಾಗಿದೆ<br>4.ಕೋಟೆಗಳ ತುಂಬಾ ಹಲವಾರು ಬಾಗಿಲುಗಳಿವೆ<br>5.ಶಿವನ ಊರಲ್ಲಿ ಮೊಗ್ಗುಗಳಿಗೆ ಭಾರಿ ಬೇಡಿಕೆ<br>6.ವಿಜಯ ಪತಾಕೆ ಹಾರಿಸಿ ಪುರದೊಳಗೆ ಪ್ರವೇಶಿಸಿದ<br>7.ನನ್ನದೇ ಊರೆಂದು ಗೆರೆ ಎಳೆದ ದ್ಯಾವಣ್ಣ |

<table>
<tr>
<td></td>
<td></td>
<td></td>
<td>8.ಆ ನಗರದ ರಾಜನ ಹೆಸರು ಚಾಮರಾಜ<br>9.ಗಿರಿಗಳ ಮಧ್ಯೆ ಯಾದವರು ವಾಸವಾಗಿದ್ದಾರೆ.<br>10.ರಾಯರು ತಮ್ಮ ಮಗಳನ್ನು ಒಂದು ಚಿಕ್ಕ ಊರಿಗೆ ಕಳುಹಿಸಿದ್ದಾರೆ.(ಅವಧಿಗಳು-03)</td>
</tr>
<tr>
<td>14.ಭಾರತದ ರಾಷ್ಟ್ರ ಧ್ವಜ,ರಾಷ್ಟ್ರ ಚಿಹ್ನೆ, ರಾಷ್ಟ್ರಗೀತೆ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಗುರುತಿಸುತ್ತಾರೆ.</td>
<td>14.1.ಭಾರತದ ರಾಷ್ಟ್ರ ಧ್ವಜದ ರಚನೆ, ವಿನ್ಯಾಸ ಮತ್ತು ಅದರ ಮಹತ್ವದ ಬಗ್ಗೆ ತಿಳಿಯುವವರು.<br><br>14.2.ರಾಷ್ಟ್ರ ಲಾಂಛನದ ವಿನ್ಯಾಸ, ಸಂದೇಶ ಮತ್ತು ಅದರ ಮಹತ್ವದ ಬಗ್ಗೆ ತಿಳಿಯುವವರು.<br>14.3.ರಾಷ್ಟ್ರ ಗೀತೆಯ ರಚನೆ ಇತಿಹಾಸ ಮತ್ತು ಗಾಂಭೀರ್ಯತೆ ಮತ್ತು ಅದರ ಮಹತ್ವದ ಬಗ್ಗೆ ತಿಳಿಯುವವರು.<br>14.4.ವಿವಿಧ ರಾಷ್ಟ್ರೀಯ</td>
<td>14.1.ಚಿತ್ರ ಬಿಡಿಸುವುದು: ನಮ್ಮ ದೇಶದ ರಾಷ್ಟ್ರ ಬಾವುಟ ಮತ್ತು ರಾಷ್ಟ್ರ ಲಾಂಛನದ ಚಿತ್ರಗಳಿಗೆ ಅಂದವಾದ ಬಣ್ಣ ಹಚ್ಚಿ ಅದರ ಮಹತ್ವವನ್ನು ತಿಳಿಸಿ.<br>14.2. ಗಾಯನ ಸ್ಪರ್ಧೆ:ರಾಷ್ಟ್ರಗೀತೆ ಮತ್ತು ರಾಷ್ಟ್ರೀಯ ಗೀತೆಯ ಕುರಿತು ಗಾಯನ ಸ್ಪರ್ಧೆ ಏರ್ಪಡಿಸಿ.<br>14.3.ಪ್ರಬಂಧ ಸ್ಪರ್ಧೆ: ರಾಷ್ಟ್ರೀಯ ಹಬ್ಬಗಳ ಕುರಿತು ಪ್ರಬಂಧ ಬರೆಯಿರಿ.<br>14.4.ಆಲ್ಬಮ್ ತಯಾರಿಕೆ: ನಮ್ಮ ದೇಶದ ರಾಷ್ಟ್ರೀಯ ಲಾಂಛನಗಳ ಚಿತ್ರಗಳನ್ನು ಸಂಗ್ರಹಿಸಿ ಸುಂದರವಾದ ಆಲ್ಬಮ್ ತಯಾರಿಸಿ.<br>14.5. ಚಿತ್ರಗಳನ್ನು ಗುರುತಿಸಿ ಹೆಸರಿಸುವುದು: ಈ ಕೆಳಗಿನ ಚಿತ್ರಗಳನ್ನು ಗುರುತಿಸಿ ನಮ್ಮ ರಾಷ್ಟ್ರೀಯ ಲಾಂಛನಗಳನ್ನು ಹೆಸರಿಸಿ.
<table>
<tr><td></td><td></td><td> </td><td></td></tr>
<tr><td></td><td></td><td> 
</td><td></td></tr>
<tr><td></td><td></td><td> </td><td></td></tr>
</table>
</td>
<td>14.1.ನಿಮಗೆ ಕೆಳಗೆ ನೀಡಲಾದ ರಾಷ್ಟ್ರ ಬಾವುಟ ಮತ್ತು ರಾಷ್ಟ್ರ ಲಾಂಛನದ ಚಿತ್ರಗಳಿಗೆ ಅಂದವಾದ ಬಣ್ಣ ಹಚ್ಚಿ, ಅದರ ಮಹತ್ವವನ್ನು ತಿಳಿದುಕೊಳ್ಳುವುದಕ್ಕೆ ಸಹಕರಿಸಿ.<br><br><br>14.2.ತರಗತಿಯಲ್ಲಿ ರಾಷ್ಟ್ರಗೀತೆಯ ಗಾಯನ</td>
</tr>
</table>

| | | | |
|---|---|---|---|
| | ಹಬ್ಬಗಳ ಮಹತ್ವವನ್ನು ಅರಿಯುವರು.. |   <br>**14.6.ವೇಷಭೂಷಣ ಸ್ಪರ್ಧೆ:**ರಾಷ್ಟ್ರೀಯ ಲಾಂಛನಗಳು ಮತ್ತು ರಾಷ್ಟ್ರ ನಾಯಕರ ವೇಷಭೂಷಣ ಸ್ಪರ್ಧೆ ಏರ್ಪಡಿಸಿ.<br>**14.7.ಸಿನಿಮಾ ವೀಕ್ಷಣೆ:**ರಾಷ್ಟ್ರ ಭಕ್ತಿ ಸಾರುವ ಸಂಗೋಳ್ಳಿ ರಾಯಣ್ಣ ಚಲನ ಚಿತ್ರ ವೀಕ್ಷಿಸಿ. | ಸ್ಪರ್ಧೆಯನ್ನು ಏರ್ಪಡಿಸಿ, ನಮ್ಮ ರಾಷ್ಟ್ರ ಗೀತೆಯ ಉಚ್ಚಾರ, ಸ್ಪಷ್ಟತೆ, ಗಾಂಭೀರ್ಯತೆ ಮತ್ತು ಧ್ವನಿ ಏರಿಳಿತವನ್ನು ಗಮನಿಸುವಂತೆ ಪ್ರೇರೇಪಿಸಿ.<br>14.3.ಶಾಲೆಯಲ್ಲಿ ವಿವಿಧ ರಾಷ್ಟ್ರೀಯ ಹಬ್ಬಗಳ ಆಚರಣೆಗಳನ್ನು ಮಾಡುವುದು ಮತ್ತು ವಿವಿಧ ರಾಷ್ಟ್ರೀಯ ಹಬ್ಬಗಳ ವೀಡಿಯೊ ಕ್ಲಿಪ್ಪಗಳನ್ನು ತೋರಿಸಲು ಸಹಕರಿಸಿ.<br>14.4.ನಮ್ಮ ದೇಶದ ಗೌರವವನ್ನು ಹೆಚ್ಚಿಸುವ, ನಮ್ಮ ದೇಶದ ರಾಷ್ಟ್ರೀಯ ಲಾಂಛನಗಳ ಚಿತ್ರಗಳನ್ನು ಸಂಗ್ರಹಿಸಿ, ಸುಂದರವಾದ ಆಲ್ಬಮ್ ರಚಿಸಲು ಸಹಕರಿಸಿ.<br>14.6.ಮಕ್ಕಳಿಗೆ ಪಾತ್ರದ ಪೂರ್ವ ಮಾಹಿತಿ ನೀಡಿ, ವೇಷಭೂಷಣದೊಂದಿಗೆ |

| | | | |
|---|---|---|---|
| | | | ಅಭಿನಯಿಸುವಂತೆ ಪ್ರೇರೇಪಿಸಿ.<br>14.7.ರಾಷ್ಟ್ರಪ್ರೇಮ ಸಾರುವ ಚಲನ ಚಿತ್ರದ ಬಗ್ಗೆ ಹಿಮ್ಮಾಹಿತಿ ನೀಡಿ ಪರಿಚಯಿಸಿ.<br>(ಅವಧಿಗಳು-03 |
| 17.ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳ ನಡುವೆ ವ್ಯತ್ಯಾಸಿಸುತ್ತಾರೆ. ಮತ್ತು ಅವುಗಳ ಮಹತ್ವವನ್ನು ತಿಳಿದುಕೊಳ್ಳುವರು | 17.1.ಮಕ್ಕಳ ಹಕ್ಕುಗಳ ಅರ್ಥ, ಮಹತ್ವವನ್ನು ತಿಳಿದುಕೊಳ್ಳುವರು.<br><br>17.2.ಮಾನವ ಹಕ್ಕುಗಳ ಅರ್ಥ, ಮಹತ್ವವನ್ನು ತಿಳಿದುಕೊಳ್ಳುವರು. | 17.1.**ವಿಂಗಡನೆ ಮಾಡುವುದು:**ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಚಿತ್ರಗಳನ್ನು ಗುರುತಿಸಿ ಅವುಗಳನ್ನು ವಿಂಗಡಿಸಿ.<br>17.2. **ಚರ್ಚಾಸ್ಪರ್ಧೆ:**ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಚರ್ಚಿಸಿರಿ.<br>17.3. **ಮಾಹಿತಿ ಸಂಗ್ರಹ:**ನಮ್ಮ ದೇಶದಲ್ಲಿ ಆಗುತ್ತಿರುವ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗಳ ಸನ್ನಿವೇಶಗಳ ಮಾಹಿತಿಯನ್ನು ಸಂಗ್ರಹಿಸಿ.<br>17.4. **ವರದಿ ತಯಾರಿಕೆ:**ನಿಮ್ಮ ಮನೆಯಲ್ಲಿ ನೀವು ಚಲಾಯಿಸುವ ಹಕ್ಕುಗಳ ಮತ್ತು ನಿಮ್ಮ ಕುಟುಂಬದವರು ನಿಮಗೆ ನೀಡದಿರುವ ಹಕ್ಕುಗಳ ಬಗ್ಗೆ ಚಿಕ್ಕ ವರದಿ ತಯಾರಿಸಿ.<br>17.5. **ಭಾವಚಿತ್ರಗಳ ಸಂಗ್ರಹ:**ಜಗತ್ತಿನಲ್ಲಿ ಮಾನವ ಹಕ್ಕುಗಳ ಪರವಾಗಿ ಹೋರಾಟ ಮಾಡಿದ ವ್ಯಕ್ತಿಗಳ ಭಾವಚಿತ್ರಗಳನ್ನು ಸಂಗ್ರಹ ಮಾಡಿರಿ.<br>17.6. **ಚಿತ್ರ ಫಲಕಗಳ ಪ್ರದರ್ಶನ:** ಕೊಟ್ಟಿರುವ ಚಿತ್ರಗಳನ್ನು ಸರಿಯಾಗಿ ಗಮನಿಸಿ, ನಮ್ಮಸಂವಿಧಾನವು ತನ್ನ ಪ್ರಜೆಗಳಿಗೆ ಕೊಟ್ಟಿರುವ ಆರು ಮೂಲಭೂತ ಹಕ್ಕುಗಳನ್ನು ಬರೆಯಿರಿ. | 17.1.ಶಿಕ್ಷಕರು ಮಕ್ಕಳಿಂದ ತನ್ನ ಸುತ್ತಮುತ್ತ ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿರುವ ಉದಾಹರಣೆಗಳನ್ನು ತೆಗೆದುಕೊಂಡು ಚಿತ್ರಗಳ ಸಹಾಯದೊಂದಿಗೆ ವಿಂಗಡಿಸುವಂತೆ ತಿಳಿಸಿ.<br>17.2.ತರಗತಿಯಲ್ಲಿ ಗುಂಪುಗಳನ್ನು ರಚಿಸಿ, ಒಂದೊಂದು ಹಕ್ಕುಗಳ ಕಾರ್ಡಗಳನ್ನು ನೀಡಿ. ಗುಂಪಿನಲ್ಲಿ ಚರ್ಚಿಸುವಂತೆ ಅನುಕೂಲಿಸಿ.<br>17.3.ಮಕ್ಕಳು ತಮ್ಮ ಸುತ್ತಮುತ್ತ |

| | | | |
|---|---|---|---|
| | | 17.7.ವ್ಯಕ್ತಿ ಸಂದರ್ಶನ: ಎನ್ ಜಿ ಓಗಳಿಗೆ ಭೇಟಿ ನೀಡಿ ಮಕ್ಕಳ ಸಂರಕ್ಷಣೆ ಮಾಡುವ ಕುರಿತು ಪ್ರಶ್ನಿಸಿ ಉತ್ತರ ಪಡೆಯಿರಿ.<br>17.8.ನಾಟಕ ಪ್ರದರ್ಶನ: ಮಕ್ಕಳ  ಸಂರಕ್ಷಣೆಯ ನಾಟಕ<br>17.9.ಬಯೋಗ್ರಾಫಿ ರಚಿಸಿ: | ನಡೆಯುತ್ತಿರುವ ಘಟನೆಗಳನ್ನು, ಉದಾಹರಣೆಗಳನ್ನು ಅರಿಯಲು ದೂರದರ್ಶನ, ಸಿನಿಮಾ ಮತ್ತು ವೃತ್ತ ಪತ್ರಿಕೆಗಳನ್ನು ಬಳಕೆ ಮಾಡುವಂತೆ ತಿಳಿಸಿ.<br>17.4.ಮಕ್ಕಳು ಅವರು ಅನುಭವಿಸುವ ಹಕ್ಕುಗಳ  ಬಗ್ಗೆ ಹಿಮ್ಮಾಹಿತಿಯನ್ನು ಕಲೆ ಹಾಕಲು ಪ್ರೋತ್ಸಾಹಿಸಿ.<br>17.5. ವಿವಿಧ ಮಾನವ ಹಕ್ಕುಗಳ ಹೋರಾಟಗಾರರ ಪರಿಚಯ ಮಾಡಿಸಿ/ಅವರೇ ಮಾಡಿಕೊಳ್ಳುವಂತೆ ಮಾಡಿರಿ. ಮಾಹಿತಿ ಕಲೆಹಾಕುವ ಪ್ರಾಜೆಕ್ಟ್ ನೀಡಿರಿ.<br>17.6ಆರು ಮೂಲಭೂತ ಹಕ್ಕುಗಳನ್ನು  ಪ್ರತಿಬಿಂಬಿಸುವ ಚಿತ್ರಫಲಕಗಳನ್ನು ಪ್ರದರ್ಶಿಸಿ. ಮಕ್ಕಳು ವಿವರಿಸಬೇಕು.<br>17.7.ಶಾಲೆಯನ್ನು ಮಹಿಳಾ |

| | | | |
|---|---|---|---|
| | | | ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎನ್,ಜಿ,ಓ ಗಳು ಸಂದರ್ಶಿಸುವಂತೆ ಅನುಕೂಲಿಸಿ.<br>17.8.ಶಾಲೆಯಲ್ಲಿ ಮಕ್ಕಳ ಸಂರಕ್ಷಣೆಯ ಚಲನಚಿತ್ರ ಪ್ರದರ್ಶಿಸಿ ಮಾದರಿ ನಾಟಕಗಳನ್ನು ಮಾಡಲು ಪ್ರೇರೇಪಿಸಿ.<br>17.9.ಕೈಲಾಸ ಸತ್ಯಾರ್ಥಿ, ಮಲಾಲಾ, ನೆಲ್ಸನ್ ಮಂಡೇಲಾ, ಗಾಂಧೀಜಿಯವರ ಬಯೋಗ್ರಾಫಿ ಓದಿ ಮಕ್ಕಳು ಹಂಚಿಕೊಳ್ಳಲಿ.<br>17.8.ಸತ್ಯಮೇವ ಜಯತೆ ಯೂ ಟ್ಯೂಬ್ ವೀಕ್ಷಿಸಿ. ಚರ್ಚಿಸಿರಿ.<br>(ಅವಧಿಗಳು-03) |

| | |
|---|---|
| ಚ:01.ನಿಮಗೆ ನೀಡಲಾದ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಚಿತ್ರಗಳನ್ನು ಗುರುತಿಸಿ, ಅವುಗಳನ್ನು ಮಕ್ಕಳ ಮತ್ತು ಮಾನವ ಹಕ್ಕುಗಳಾಗಿ ವಿಂಗಡಿಸಿ. ಸಂಬಂಧಿಸಿದ ಸೂಚಿತ ಪಟ್ಟಿಯಲ್ಲಿ ಬರೆಯಿರಿ.<br> | ಚ:-02 ಈ ಕೆಳಗಿನ ಚಿತ್ರಗಳನ್ನು ಊಹಿಸಿ ಮೂಲಭೂತ ಹಕ್ಕುಗಳನ್ನು ಹೆಸರಿಸಿ<br> |

| ಕ್ರ.ಸಂ | ಮಕ್ಕಳ ಹಕ್ಕುಗಳ ವಂಚನೆ | ಮಾನವ ಹಕ್ಕುಗಳ ವಂಚನೆ |
| --- | --- | --- |
| 1 | | |
| 2 | | |
| 3 | | |
| 4 | | |
| 5 | | |
| 6 | | |

ಸೂಚನೆಗಳು:-*ಮಕ್ಕಳ ಗುಂಪುಗಳನ್ನು ರಚಿಸಿರಿ.

* ಮಕ್ಕಳಿಂದ, ತನ್ನ ಸುತ್ತಮುತ್ತಲಿನ ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿರುವ ಉದಾಹರಣೆಗಳನ್ನು ಪಡೆದುಕೊಳ್ಳಿರಿ

*ಮಕ್ಕಳೊಂದಿಗೆ ಚಿತ್ರಗಳ ಪರಿಚಯ ಮಾಡಿರಿ.

*ಮಕ್ಕಳಿಂದ ಉತ್ತರ ಪಡೆದು ವಿಂಗಡನೆ ಮಾಡಿ ಸಂಬಂಧಿಸಿದ ಪಟ್ಟಿಯಲ್ಲಿಬರೆಯಲು ಅನುಕೂಲಿಸಿರಿ.





ಸೂಚನೆಗಳು:- *ಮಕ್ಕಳ ಗುಂಪುಗಳನ್ನು ರಚಿಸಿರಿ.

*ಶಿಕ್ಷಕರು ಚಿತ್ರಗಳ ಪರಿಚಯ ಮಾಡಿರಿ.

*ಆರು ಮೂಲಭೂತ ಹಕ್ಕುಗಳನ್ನು ಪ್ರತಿಬಿಂಬಿಸುವ ಚಿತ್ರಫಲಕಗಳನ್ನು ಪ್ರದರ್ಶಿಸಿ, ಗುರುತಿಸಲು ತಿಳಿಸಿ.

*ಮಕ್ಕಳು ಉತ್ತರಿಸುತ್ತಾ ಕಲ್ಪನಾ ಚಿತ್ರದಲ್ಲಿ ಬರೆಯಲು ಅನುಕೂಲಿಸಿರಿ.

| | | | |
| --- | --- | --- | --- |
| 4.ಪ್ರಾಚೀನ ನಾಗರೀಕತೆಗಳ ಅಭಿವೃದ್ದಿಗೆ ಕಾರಣಗಳು ಮತ್ತು ಅದಕ್ಕೆ ಕಾರಣವಾದ ನದಿಗಳನ್ನು ಗುರುತಿಸುವರು, ಹಾಗೂ ಜಗತ್ತಿನ ಸಮಾಜ ಮತ್ತು ಸಂಸ್ಕೃತಿಗೆ ಅವುಗಳ ಕೊಡುಗೆಗಳನ್ನು ವಿವರಿಸುವರು. | 4.1.ವಿಶ್ವ ಭೂಪಟದಲ್ಲಿ ಸಿಂಧೂ, ಈಜಿಪ್ಟ್, ಮೆಸಪೊಟೊಮಿಯಾ ಮತ್ತು ಚೀನಾ ನಾಗರಿಕತೆ ಗಳಿಗೆ ಕಾರಣವಾದ ನದಿಗಳನ್ನು ಗುರುತಿಸುವರು.<br>4.2.ಸಿಂಧೂ,ಈಜಿಪ್ಟ್,ಮೆಸಪೊಟೊಮಿಯಾ ಮತ್ತು ಚೀನಾ ನಾಗರೀಕತೆಗಳ ನಗರಜೀವನ, ಆಡಳಿತ, ಸಾಮಾಜಿಕ, ಆರ್ಥಿಕ, ವ್ಯಾಪಾರ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ತಿಳಿದುಕೊಳ್ಳುವರು.<br>4.3.ವಿವಿಧ ಪ್ರಾಚೀನ ನಾಗರೀಕತೆಗಳ ನಡುವಿನ | 4.1.**ಚರ್ಚಾ ಸ್ಪರ್ಧೆ:**ನಾಗರಿಕತೆಯ ಉದಯಕ್ಕೆ ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸಿರಿ.<br>4.2.**ನಕಾಶೆ ರಚನೆ:**ವಿಶ್ವದ ಭೂಪಟದಲ್ಲಿ ಪ್ರಾಚೀನ ನಾಗರಿಕತೆಗಳಿಗೆ ಕಾರಣವಾದ ನದಿಗಳನ್ನು ಗುರುತಿಸಿರಿ.<br><br><br>4.3.**ಪ್ರಬಂಧ ರಚನೆ:**ಸಿಂಧೂ ನಾಗರಿಕತೆಯ ಕಾಲದ ನಗರಯೋಜನೆಯ ಬಗ್ಗೆ ಪ್ರಬಂಧವನ್ನು ರಚಿಸಿ.<br>4.4.**ಕೋಷ್ಟಕ ರಚನೆ:**ವಿವಿಧ ನಾಗರಿಕತೆಗಳ ನಡುವಿನ | 4.1.ನಾಗರಿಕತೆಯ ಉದಯಕ್ಕೆ ಕಾರಣಗಳ ಹಿಮ್ಮಾಹಿತಿಯ ಚರ್ಚಿಸುವ ಮೂಲಕ ಪರಿಚಯಿಸಿ.<br>4.2.ಜಗತ್ತಿನ ಭೂನಕಾಶೆಯನ್ನು ರಚಿಸುವ ಕೌಶಲ ಬೆಳೆಸಿ ಹಾಗೂ ಖಂಡಗಳ ಪರಿಚಯ ಮಾಡಿಸಿ, ಗುರುತಿಸುವಂತೆ ಅನುಕೂಲಿಸಿ.<br>4.3.ಮಕ್ಕಳು ತಮ್ಮ ಸಮೀಪದ ನಗರಗಳ ಉದಾಹರಣೆಯನ್ನು ನೀಡಲಿ. ವಿವಿಧ |

<table>
<tr>
<td></td>
<td>ಅಂಶಗಳ  ವ್ಯತ್ಯಾಸೀಕರಿಸುವರು.<br>4.4.ಪ್ರಾಚೀನ ನಾಗರೀಕತೆಗಳ ನಾಗರಿಕತೆಗೆ ಇಂದಿನ ನಾಗರಿಕತೆಯ ಜೀವನಕ್ರಮವನ್ನು ಹೋಲಿಸುವರು.</td>
<td>ವ್ಯತ್ಯಾಸಗಳನ್ನು ಕೋಷ್ಟಕವನ್ನು ರಚಿಸಿ ಬರೆಯಿರಿ.<br><table><tr><td>ವಿಷಯಗಳು</td><td>ಸಿಂಧೂ</td><td>ಮೆಸಪ</td><td>ಈಜಿಪ್ಟ್</td><td>ಚೀನಾ</td></tr><tr><td></td><td></td><td></td><td></td><td></td></tr></table>4.5.ಆಲ್ಬಂ ರಚನೆ:ಜಗತ್ತಿನ ಪ್ರಾಚಿನ ಏಳು ಅದ್ಭುತಗಳ ಚಿತ್ರಗಳನ್ನು ಸಂಗ್ರಹಿಸಿ.<br>4.6.ಪಟ್ಟಿ ಮಾಡಿ:ಪ್ರಾಚೀನ ನಾಗರೀಕತೆ ಮತ್ತು ಇಂದಿನ ನಾಗರಿಕತೆಗಳ ವೈಶಿಷ್ಟ್ಯತೆಗಳನ್ನು ಪಟ್ಟಿ ಮಾಡಿರಿ.</td>
<td>ಮೂಲಭೂತ ಸೌಕರ್ಯಗಳನ್ನು ಸಹಸಂಬಂಧೀಕರಿಸುವಂತೆ ಮಾಡಿಸಿ.<br>4.4.ವಿವಿಧ ನಾಗರೀಕತೆಗಳ  ಕೋಷ್ಟಕ ರಚಿಸಿ, ವ್ಯತ್ಯಾಸೀಕರಿಸಿ ಉತ್ತರಿಸುವಂತೆ ಪ್ರೋತ್ಸಾಹಿಸಿ.<br>4.5.ಯುಟೂಬ್, ಗೂಗಲ್, ವೃತ್ತ ಪತ್ರಿಕೆಗಳು ಹಾಗೂ ಮ್ಯಾಗ್ಜೀನ್ ಬಳಕೆ ಮಾಡಲು ಅನುಕೂಲಿಸಿ.<br>4.6. ಪ್ರಾಚೀನ ಮತ್ತು ಈಗಿನ ನಾಗರೀಕತೆಯ ಎರಡು ಪಟ್ಟಿಗಳನ್ನು ತಯಾರಿಸಿ. ಸೌಲಭ್ಯ ಕಾರ್ಡ್ಗಳನ್ನು ತಯಾರಿಸಿ. ಹೋಲಿಕೆ & ವ್ಯತ್ಯಾಸ ಮಾಡಲು ಸಹಕರಿಸಿ.(ಅವಧಿಗಳು-03)</td>
</tr>
<tr>
<td>7.ಭಾರತದಲ್ಲಿ ಹೊಸ ಧರ್ಮಗಳ ಏಳಿಗೆಗೆ ಕಾರಣಗಳನ್ನುವಿವರಿಸುತ್ತಾರೆ ಮತ್ತು ಬದಲಾವಣೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ</td>
<td>7.1.ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ತಿಳಿದುಕೊಳ್ಳುವುದು.<br>7.2.ಬುದ್ಧ ಮತ್ತು ಮಹಾವೀರನ ಜೀವನ ಕುರಿತು ತಿಳಿದುಕೊಳ್ಳುವುದು.<br>7.3.ಬುದ್ಧ ಮತ್ತು ಮಹಾವೀರನ ಬೋಧನೆ ಮತ್ತು ತತ್ವಗಳನ್ನು ತಿಳಿದುಕೊಳ್ಳುವುದು</td>
<td>7.1.ಚರ್ಚಾ ಸ್ಪರ್ಧೆ: ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸಿರಿ.<br>7.2.ಪಾತ್ರಾಭಿನಯ:“ಬುದ್ಧನ ಮಹಾ ಪರಿತ್ಯಾಗ” ಕುರಿತು ಪಾತ್ರಾಭಿನಯ ಮಾಡಿಸಿ.<br>7.3.ವಿಷಯ ಮಂಡನೆ: ಗೌತಮ ಬುದ್ಧ ಮತ್ತು ಮಹಾವೀರರ ಬೋಧನೆಗಳು ಕೆಲವು ವೈದಿಕ ಕಾಲದ</td>
<td>7.1.ಹೊಸ ಧರ್ಮಗಳ ಉದಯದ ಕಾರಣಗಳಿಗೆ ಹಿಮ್ಮಾಹಿತಿ ಕಲೆ ಹಾಕುವಂತೆ ಅನುಕೂಲಿಸಿ.<br>7.2.ಬುದ್ಧ ಮತ್ತು ಮಹಾವೀರರ ಕುರಿತು ಸಂಬಂದಿಸಿದ ಕಥೆಗಳನ್ನು ತಿಳಿಸಿ.<br>7.3.ಅಂದಿನ ಸಮಾಜದ ಆಶಯಗಳಿಗೆ</td>
</tr>
</table>

| | | | |
|---|---|---|---|
| ಒಪ್ಪಿಕೊಳ್ಳುತ್ತಾರೆ. | 7.4.ಬುದ್ಧ ಮತ್ತು ಮಹಾವೀರನ ಬೋಧನೆ ಮತ್ತು ತತ್ವಗಳನ್ನು ಇಂದಿನ ಸಮಾಜ ಜೀವನಕ್ಕೆ ಅಳವಡಿಸಿಕೊಳ್ಳುವರು. | ಆಚರಣೆಗಳನ್ನು ಪ್ರಶ್ನಿಸುವಂತೆ ಮಾಡಿರಿ. ಈ ವಿಷಯ ಕುರಿತು ವಿಷಯಮಂಡನೆಗೆ ಅನುಕೂಲಿಸಿರಿ.<br>**7.4.ನಾಟಕ ಪ್ರದರ್ಶನ:** ಅಂಗುಲಿಮಾಲಾ ಮತ್ತು ಬುದ್ಧನ ನಡುವೆ ಸಂವಾದವನ್ನು ನಾಟಕ ಪ್ರದರ್ಶನ ಮಾಡಿಸಿ.<br>**7.5.ಪ್ರಂಬಂಧ ರಚನೆ:** ಭಾರತದ ಸಮಾಜದ ಮೇಲೆ ಜೈನ ಮತ್ತು ಬೌದ್ಧ ಧರ್ಮದ ಪ್ರಭಾವದ ಬಗ್ಗೆ ಪ್ರಬಂಧ ಬರೆಯಿರಿ.<br>**7.6.ಹೆಸರಿಸಿ:** ಅಶೋಕ ಚಕ್ರ ಚಿತ್ರದ ಸಹಾಯದೊಂದಿಗೆ ಗೌತಮ ಬುದ್ಧನು ಬೋಧಿಸಿದ ತತ್ವಗಳನ್ನು ಪ್ರತಿ ಗೆರೆಯಮೇಲೆ ಬರೆಯಿರಿ.<br>**7.7.ಪಟ್ಟಿ ಮಾಡಿ:** ಸ್ಥಳೀಯವಾಗಿ ಆಚರಿಸುವ ಧಾರ್ಮಿಕ ಹಬ್ಬಗಳನ್ನು ಪಟ್ಟಿ ಮಾಡಿರಿ. | ವಿರುದ್ಧವಾದ, ವೈದಿಕ ಕಾಲದ ಅಂಶಗಳನ್ನು ವಿಶ್ಲೇಷಿಸುವಂತೆ ಪ್ರೇರೇಪಿಸಿ.<br>7.4.ಮಕ್ಕಳಿಗೆ ಜಾತಕ ಕಥೆಗಳು,ಸಿನಿಮಾ ವಿಕ್ಷಣೆ ಮಾಡಲು ಅನುಕೂಲಿಸಿ.<br>7.5.ಮಕ್ಕಳನ್ನು ಗುಂಪುಗಳನ್ನಾಗಿ ರಚನೆಮಾಡಿ, ಪಾತ್ರಗಳನ್ನು ಹಂಚಿ ಅಭ್ಯಾಸಮಾಡಲು ಸಹಕರಿಸಿ.<br> 7.6.ಈ ಚಿತ್ರದ ಸಹಾಯದೊಂದಿಗೆ ಪ್ರತಿ ಗೆರೆಯಮೇಲೆ ಮಕ್ಕಳಿಂದ ಬೆರಳು ತೋರಿಸುತ್ತಾ, ಮೌಲ್ಯಗಳ ಪರಿಚಯ ಮಾಡಿಸಿ.<br>(ಅವಧಿಗಳು-03) |
| 18.ಪ್ರಮುಖ ಭೌಗೋಳಿಕ ಲಕ್ಷಣಗಳಾದ ಸಾಗರಗಳು,ನದಿಗಳು, ಪರ್ವತಗಳು, ಮೈದಾನಗಳು ಮತ್ತು ಏಷ್ಯಾದ ಗಡಿ ಪ್ರದೇಶಗಳನ್ನು | 18.1.ವಿಶ್ವ ಭೂ ನಕಾಶೆ ರಚಿಸಿ ಪ್ರದೇಶಗಳನ್ನು ಗುರುತಿಸುವರು.<br>18.2.ವಿಶ್ವದ ಭೌಗೋಳಿಕ ಲಕ್ಷಣಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳುವರು. | **18.1.ನಕಾಶೆ ರಚಿಸಿ:** ನಿಮ್ಮ ಊರಿನ ಸುತ್ತಮುತ್ತಲಿನ ಭೌಗೋಳಿಕ ಲಕ್ಷಣಗಳನ್ನು ಹೊಂದಿರುವ ಭೂ ನಕಾಶೆ ರಚಿಸಿ.<br>**18.2.ಸ್ಥಳಗಳನ್ನು ಗುರುತಿಸಿ:**ವಿಶ್ವದ ಭೂ ನಕಾಶೆ ರಚಿಸಿ ಪ್ರಮುಖ ಖಂಡಗಳನ್ನುಗುರುತಿಸಿ.<br> | 18.1.ಮಕ್ಕಳಿಗೆ ತಮ್ಮ ಸುತ್ತಮುತ್ತ ಪರಿಸರದ ಭೌಗೋಳಿಕ ಲಕ್ಷಣಗಳ ಬಗ್ಗೆ ಪರಿಚಯ ಮಾಡಿಸಿ, ನಕಾಶೆ ರಚನೆ ಮಾಡಲು ಸಹಕರಿಸಿ.<br>18.2. ಮಾದರಿಯ ವಿಶ್ವದ ಭೂಪಟದ ಸಹಾಯ ಪಡೆದು ಮಕ್ಕಳಿಗೆ ಪರಿಚಯಿಸಿ, |

| | | | |
|---|---|---|---|
| ಗುರುತಿಸುವರು.<br>(ಅವಧಿಗಳು-03) | 18.3.ವಿಶ್ವದ ಖಂಡಗಳು, ಸಾಗರಗಳು, ದೇಶಗಳು ಪರ್ವತಗಳು, ಮೈದಾನಗಳು ಮತ್ತು ಗಡಿಗಳ ಮಾಹಿತಿಯನ್ನು ತಿಳಿದುಕೊಳ್ಳುವರು. | **18.3. ರಂಗೋಲಿ ಚಿತ್ರ ತಯಾರಿಸಿ:**ವಿಶ್ವದ ಆಳ ಸಾಗರದ ಮೈದಾನಗಳನ್ನು ರಂಗೋಲಿಯ ಮೂಲಕ ಚಿತ್ರವನ್ನು ತಯಾರಿಸಿ.<br>**18.4.ಮಾಹಿತಿ ಸಂಗ್ರಹಣೆ:**ಶಾಲೆಯ ಗ್ರಂಥಾಲಯದ ಸಹಾಯದೊಂದಿಗೆ ವಿಶ್ವದ ಖಂಡಗಳ, ಸಾಗರಗಳ, ದೇಶಗಳ, ಪರ್ವತಗಳ ಮತ್ತು ಮೈದಾನಗಳ ಮಾಹಿತಿಯನ್ನು ಸಂಗ್ರಹಿಸಿ.<br>**18.5.ರಸಪ್ರಶ್ನೆ ಕಾರ್ಯಕ್ರಮ:**ವಿಶ್ವದ ಭೌಗೋಳಿಕ ಲಕ್ಷಣಗಳ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸಿ.<br>**18.6.ಆಲ್ಬಂ ರಚನೆ:**ವಿವಿಧ ಭೂ ನಕಾಶೆಗಳ ಆಲ್ಬಂ ರಚಿಸಿ.<br>**18.7.ವಿಡಿಯೋ ಪ್ರದರ್ಶನ:** ಅನಿಮಲ್ ಪ್ಲಾನೆಟ್, ನ್ಯಾಷನಲ್ ಜಿಯೋಗ್ರಾಫಿಕಲ್ ಚಾನೆಲ್ ನಲ್ಲಿ ಬರುವ ಭೌಗೋಳಿಕ ವಿಡಿಯೋಗಳನ್ನು ವೀಕ್ಷಿಸಿ.<br>**18.8.ಪಟ್ಟಿ ಮಾಡಿ ಸಂಬಂಧೀಕರಿಸಿ:** ಸ್ಥಳೀಯವಾಗಿರುವ ನದಿ, ಪರ್ವತ, ಗಿರಿಧಾಮ, ಮೈದಾನಗಳನ್ನು ಪಟ್ಟಿ ಮಾಡಿ, ಸಂಬಂಧೀಕರಿಸಿ ಬರೆಯಿರಿ. | ಮಕ್ಕಳಿಂದ ನಕಾಶೆ ರಚನೆ ಮಾಡಲು ಪ್ರೇರೇಪಿಸಿ.<br> 18.3.ಈ ಕೆಳಗಿನ ರಂಗೋಲಿ ಮಾದರಿಯಂತೆ ಸಾಗರದ ಮೈದಾನಗಳನ್ನು ರಂಗೋಲಿಯಲ್ಲಿ ಬಣ್ಣ ತುಂಬಿಸಲು ಪ್ರೋತ್ಸಾಹಿಸಿ.<br>18.5.ಶಾಲೆಯ ಗ್ರಂಥಾಲಯ ಮತ್ತು ಭೂಪಟಗಳ ಬಳಕೆ ಮಾಡಲು ಮಕ್ಕಳಿಗೆ ಮಾರ್ಗದರ್ಶಿಸಿ. ಪ್ರಶ್ನೋತ್ತರಗಳನ್ನು ರಚಿಸಲು ಸಹಕರಿಸಿರಿ.<br>18.6 ಹೋಬಳಿ, ತಾಲ್ಲೂಕು, ಜಿಲ್ಲೆ, ರಾಜ್ಯ, ದೇಶ, ವಿದೇಶಗಳ ಮಾದರಿ ನಕಾಶೆಗಳ ರಚಿಸಲು ಅನುಕೂಲಿಸಿ.<br>18.7.ಅಂತರ್ಜಾಲ, ಯೂಟ್ಯೂಬ್ ವೀಡಿಯೋಗಳನ್ನು ವೀಕ್ಷಿಸಲು ಸಹಕರಿಸಿ.<br>18.8.ಸ್ಥಳಿಯವಾಗಿರುವ ನದಿ, ಪರ್ವತ, ಮೈದಾನ ಮತ್ತು ಭೌಗೋಳಿಕ ಲಕ್ಷಣಗಳ ಪರಿಚಯ ಮಾಡಿಸಿ,ಸಂಬಂಧಿಕರಿಸಿ ಬರೆಯುಂತೆ ಪ್ರೇರೇಪಿಸಿ. |

## ಪೂರ್ವ/ಸಾಫಲ್ಯ ಪ್ರತಿಕ್ರಿಯೆಯ ಉದಾಹರಣಾತ್ಮಕ ಪ್ರಶ್ನೆಗಳು

ತರಗತಿ:8 ವಿಷಯ: ಸಮಾಜ ವಿಜ್ಞಾನ

I.ಈ ಕೆಳಗಿನ ಹೇಳಿಕೆಗಳಿಗೆ ಸೂಕ್ತವಾದ ಉತ್ತರಗಳನ್ನು ಆಯ್ದು ಕೊಂಡು ಬರೆಯಿರಿ.

1.ಮೌಖಿಕ ಆಧಾರಕ್ಕೆ ಉದಾಹರಣೆ……..

ಅ)ಶಾಸನಗಳು ಬ)ಮಹಾಭಾರತ ಡ) ಲಾವಣಿಗಳು ಕ) ಸ್ಮಾರಕಗಳು

2.ನಮ್ಮ ರಾಷ್ಟ್ರೀಯ ಪಕ್ಷಿ………..

ಅ)ಕೋಗಿಲೆ ಬ)ನವಿಲು ಡ)ಹಂಸ ಕ)ಗರುಡ

3.ಬಂಗಾಳದ ಪ್ರಸಿದ್ಧ ಸಂತರು………

ಅ)ಕಬೀರ ಬ)ರಮಾನಂದ ಡ)ರಾಯಿದಾಸ ಕ)ಚೈತನ್ಯ

II.ಮೊದಲ ಜೋಡಿಗೆ ಸಂಬಂಧಿಸಿದಂತೆ ಎರಡನೇ ಜೋಡಿಗೆ ಸಂಬಂಧಿಸಿ ಉತ್ತರ ಬರೆಯಿರಿ.

4.ಧರ್ಮ ಉಪಾಸನೆ : ಧಾರ್ಮಿಕ ಹಕ್ಕು:: ಅಭಿಪ್ರಾಯ ವ್ಯಕ್ತಪಡಿಸುವುದು:-------------

5.ಇಂದಿರಾ ಗಾಂಧಿ : ರಾಜಕೀಯ ಕ್ಷೇತ್ರ:: ಪಿ.ವಿ.ಸಿಂಧೂ: -----

6.ಕಮ್ಯುನಿಷ್ಟ್ ಸರ್ಕಾರ : ಚೀನಾ :: ಪ್ರಜಾಪ್ರಭುತ್ವ ಸರ್ಕಾರ :-----------

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

7.ನೈಲ್ ನದಿಯನ್ನು ಈಜಿಪ್ಟ್ ನಾಗರಿಕತೆಯ ವರಪ್ರಸಾದ ಎಂದು ಏಕೆ ಕರೆಯುತ್ತಾರೆ ?

8.1857 ರ ದಂಗೆಯಲ್ಲಿ ಬಂಡಾಯಗಾರರಲ್ಲಿ ಅತ್ಯಂತ ಶೂರಳು ಎಂದು ಯಾರನ್ನು ಕರೆಯುತ್ತಾರೆ?

9. ಜಿನ ಎಂದರೆ ಯಾರು ?

10. ಭಾರತವನ್ನು ಒಂದು ಪರ್ಯಾಯ ದ್ವೀಪ ಎಂದು ಏಕೆ ಕರೆಯುತ್ತಾರೆ ?

IV.ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ

11. ಮಕ್ಕಳು ಅನುಭವಿಸುವ ಯಾವುದಾದರೂ ನಾಲ್ಕು ಹಕ್ಕುಗಳನ್ನು ಹೆಸರಿಸಿ.

12.1857ರ ದಂಗೆಗೆ ತಕ್ಷಣದ ಕಾರಣ ತಿಳಿಸಿ.

V. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ

13. ಗೌತಮ ಬುದ್ಧ ಬೋಧಿಸಿದ ತತ್ವಗಳನ್ನು ತಿಳಿಸಿ. ಅವುಗಳು ಇಂದಿನ ಸಮಾಜಕ್ಕೆ ಏಕೆ ಅತ್ಯಗತ್ಯವಾಗಿವೆ ? ವಿಶ್ಲೇಷಿಸಿ.

14. ಭಾರತದ ಅಂದವಾದ ಭೂ ನಕಾಶೆ ಬಿಡಿಸಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ

1) ಗಂಗಾನದಿ 2) ಕನ್ಯಾಕುಮಾರಿ 3 ) ಬೆಂಗಳೂರು 4) ಪಾಕ್ ಜಲಸಂಧಿ

*********************** ********************** *********************